# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 887
ಸದಸ್ಯರ ಹೆಸರು : ಶ್ರೀ ಶಾಂತಾರಾಮ ಬುಡ್ನ ಸಿದ್ದಿ
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 24.07.2024.

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ನಾಗರಹೊಳೆ ರಕ್ಷಿತ ಅರಣ್ಯದ ಸುತ್ತಮುತ್ತಲಿನ ಮೈಸೂರು ಮತ್ತು ಕೊಡಗು ಜಿಲ್ಲೆಗಳ ಗಿರಿಜನರ ಹಾಡಿಗಳಿಗೆ ಕಳೆದ 35 ವರ್ಷಗಳಿಂದ ಇರುವ ಬಸ್ಸಿನ ಸೌಕರ್ಯವನ್ನು ಶಕ್ತಿ ಯೋಜನೆ ನಂತರ ಸಿಬ್ಬಂದಿಗಳ ಕೊರತೆ, ಬಸ್ಸುಗಳ ಕೊರತೆ ಮುಂತಾದ ಕಾರಣಗಳನ್ನು ನೀಡಿ ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವ್ಯಾಪ್ತಿಯಲ್ಲಿನ ನಾಗರಹೊಳೆ ರಕ್ಷಿತ ಅರಣ್ಯ ಸುತ್ತಮುತ್ತಲಿನ ಮೈಸೂರು ಮತ್ತು ಕೊಡಗು ಜಿಲ್ಲೆಗಳ ಗಿರಿಜನರ ಹಾಡಿಗೆ ಶಕ್ತಿ ಯೋಜನೆಗೂ ಮುನ್ನ ಕಾರ್ಯಾಚರಣೆ ಮಾಡುತ್ತಿದ್ದ ಸಾರಿಗೆಗಳನ್ನು ಶಕ್ತಿ ಯೋಜನೆ ನಂತರ ಸಹ ಕಾರ್ಯಾಚರಣೆ ಮಾಡಲಾಗುತ್ತಿದ್ದು, ಯಾವುದೇ ರದ್ದತಿ ಮಾಡಿರುವುದಿಲ್ಲ.</td></tr>
<tr><td>ಆ.</td><td>ಬಂದಿದ್ದಲ್ಲಿ, ಬುಡಕಟ್ಟು ಜನರೇ ಹೆಚ್ಚಿನ ಸಂಖ್ಯೆಯಲ್ಲಿರುವ ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ವೀರನಹೊಸಹಳ್ಳಿ, ನಲ್ಲೂರುಪಾಲ, ನಾಗರಹೊಳೆ, ಅಲ್ಲದೆ ಕೊಡಗು ಜಿಲ್ಲೆಯ ಕೊಳಂಗೆರೆ, ನಿಟ್ಟೂರು ಮತ್ತು ಕುಟ್ಟ ಭಾಗದಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ಸ್ಥಗಿತಗೊಳಿಸಿರುವುದರಿಂದ ಶಾಲಾ ಕಾಲೇಜುಗಳಿಗೆ ಹೋಗುವ ಮಕ್ಕಳಿಗೆ ಮಹಿಳೆಯರಿಗೆ ಮತ್ತು ಹಿರಿಯ ನಾಗರಿಕರಿಗೆ ತುಂಬಾ ತೊಂದರೆಯಾಗಿದ್ದು ಮೊದಲಿನಂತೆ ಬಸ್ಸು ಓಡಿಸಲು ಸರ್ಕಾರ ಕ್ರಮ ವಹಿಸುವುದೆ;</td><td>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ 2023-24ರ ಪೂರ್ವದ 04 ವರ್ಷಗಳಲ್ಲಿ ಹೊಸ ವಾಹನಗಳನ್ನು ಖರೀದಿಸಿರುವುದಿಲ್ಲ. 2023-24 ಹಾಗೂ 2024-25ರ ಜೂನ್ ರವರೆಗೆ ಒಟ್ಟು 922 ಬಸ್ಸುಗಳನ್ನು ಸೇರ್ಪಡೆ ಮಾಡಲಾಗಿದೆ ಹಾಗೂ 2024-25ನೇ ಸಾಲಿನಲ್ಲಿ ಒಟ್ಟು 616 ಬಸ್ಸುಗಳನ್ನು ಸೇರ್ಪಡೆಗೊಳಿಸಲು ಉದ್ದೇಶಿಸಲಾಗಿದೆ.<br><br>ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ವೀರನಹೊಸಹಳ್ಳಿ, ನಲ್ಲೂರು-ಪಾಲ, ನಾಗರಹೊಳೆ ಗ್ರಾಮಗಳಿಗೆ ಸಾರ್ವಜನಿಕ ಪ್ರಯಾಣಿಕರ, ಬುಡಕಟ್ಟು ಜನರ ಮತ್ತು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಈ ಕೆಳಕಂಡಂತೆ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ:<br><table>
<tr><th>ಕ್ರ. ಸಂ</th><th>ಮಾರ್ಗ</th></tr>
<tr><td colspan="2">ಬೆಳಿಗ್ಗೆ 8.20</td></tr>
<tr><td>1</td><td>ಹುಣಸೂರು- ತಟ್ಟೆಕೆರೆ- ಹನಗೂಡು- ದೊಡ್ಡಹೆಜ್ಜೂರು- ಭರತವಾಡಿ- ವೀರನಹೊಸಹಳ್ಳಿ-ಪೆಂಜಳ್ಳಿಗೇಟ್- ಪಾಲ ಪಕ್ಷಿರಾಜಪುರ- ಆಜಾದನಗರ-ಹುಣಸೂರು</td></tr>
<tr><td colspan="2">ಸಂಜೆ 16.30</td></tr>
<tr><td>2</td><td>ಹುಣಸೂರು- ಆಜಾದ್‌ನಗರ-ಪಾಲ- ಪೆಂಜಹಳ್ಳಿ-ಭೂತಾಳೆ ಪಂಜಳ್ಳಿ-ಹರಳಳ್ಳಿ- ಆದಳ್ಳಿ-ಹಾಡಿ-ವೀರನಹೊಸಹಳ್ಳಿ- ಭರತವಾಡಿ ಮಾರ್ಗದಲ್ಲಿ ಮತ್ತು ಅದೇ ಮಾರ್ಗದಲ್ಲಿ ಹುಣಸೂರಿಗೆ ವಾಪಾಸ್ಸು</td></tr>
<tr><td colspan="2">ಬೆಳಿಗ್ಗೆ 10.30 ಮತ್ತು ವಾಪಾಸ್ಸು ಮಧ್ಯಾಹ್ನ 13.00 ಗಂಟೆಗೆ</td></tr>
</table></td></tr>
</table>

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>
<table>
<tr><td>3</td><td>ಹುಣಸೂರು- ಆಜಾದ್‌ನಗರ- ಪಾಲ-ಪೆಂಜಹಳ್ಳಿಗೇಟ್- ಭರತವಾಡಿ-ವೀರನಹೊಸಹಳ್ಳಿ- ಚೆಕ್‌ಪೋಸ್ಟ್-ಮೂರ್ಕಲ್- ಕಾರ್ಮಾಡುಜಂಕ್ಷನ್-ಕಲ್ಲಹಳ್ಳಿ- ನಾಗರಹೊಳೆ- ನಾನಾಚೆ-ಕುಟ್ಟಾ- ಪೂಜೆಕಲ್ಲು- ಕಾಯಿಮನೆ-ಕಾಕೂರು- ಟಿ.ಶೆಟ್ಟಿಗೆರೆ- ಕೆಕೆಆರ್-ಬಾಡಗರ ಕೆರೆ-ಬಿರುನಾಣಿ</td></tr>
<tr><td></td><td>ಬೆಳಿಗ್ಗೆ 7.00, 9.00 ಮತ್ತು ಮಧ್ಯಾಹ್ನ 14.30 ಗಂಟೆಗೆ</td></tr>
<tr><td>4</td><td>ಚಕ್ಕೋಡನಹಳ್ಳಿ- ಏಟಿಕುಪ್ಪೆ-ಅರಸರಹುಂಡಿ- ಕಲ್ಲಟ್ಟಿಗೆ ಕ್ರಾಸ್-ಮೂರ್ಕಲ್ಲು- ಕೊಳಂಗೆರೆ-ಕಾಮೋರ್ಡಕ್ರಾಸ್- ಕಾಮೋರ್ಡ-ಬಾಳೆಲೆ- ವಂಡರಬಾಳು- ಬ್ರಹ್ಮಗಿರಿ-ಕಾನೂರು- ಪುತ್ತನಕರೆ-ಪೊನ್ನಂಪೇಟೆ</td></tr>
</table>
ಕೊಡಗು ಜಿಲ್ಲೆಯ ನಿಟ್ಟೂರು ಮತ್ತು ಕುಟ್ಟ ಭಾಗದಲ್ಲಿ ಸಾರ್ವಜನಿಕರು ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳ ಬೇಡಿಕೆ/ ಅವಶ್ಯಕತೆಗನುಗುಣವಾಗಿ ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಂಜೆ ವೇಳೆ ಸೇರಿಂದತೆ ಒಟ್ಟು 28 ಏಕ ಸುತ್ತುಗಳಿಗಳ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದ್ದು, ಸಾರ್ವಜನಿಕರು ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳು ಸದರಿ ಸಾರಿಗೆಗಳ ಸದುಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ.
ಆದ್ದರಿಂದ, ಶಕ್ತಿ ಯೋಜನೆ ಜಾರಿಯಿಂದ ಸಾರ್ವಜನಿಕ ಪ್ರಯಾಣಿಕರು ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದಿಲ್ಲ.
</td></tr>
</table>

ಸಂಖ್ಯೆ: ಟಿಡಿ 149 ಟಿಸಿಕ್ಯೂ 2024

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು